2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಕನಕಪುರ

ಸಿಸಿ ನಂಃ363 /2013

| | | | |
|---|---|---|---|
| ಚಾಸಾ ಃ | 4 | ಪ್ರಾಸಾಃ- | 2 |
| ಹೆಸರು | ಕಾಳಮ್ಮ | | |
| ತಂದೆಯ ಹೆಸರು / ಗಂಡನ ಹೆಸರು | ಲಕ್ಷ್ಮಯ್ಯ | | |
| ವಯಸ್ಸು | 55 | | |
| ಉದ್ಯೋಗ | ಕೂಲಿ | | |
| ವಿಳಾಸ | ತೇರಿನದೊಡ್ಡಿ | | |

- - - - - - - - - - - - - - - - - - - - - - - - - - - - -

ದಿಃ 3.04.2017ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ ಎಪಿಪಿ ರವರಿಂದಃ-

ಆರೋಪಿಗಳು ನನಗೆ ಪರಿಚಯವಿಲ್ಲ. ಚಾಸಾ-1ರಿಂದ 3 ನಮ್ಮ ಊರಿನವರು. ಆರೋಪಿಗಳಿಗೂ ಚಾಸಾ-1ರವರಿಗೂ ಗಲಾಟೆ ಆದ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ಹೇಳಿಕೆ ನೀಡಿಲ್ಲ. ಪೋಲೀಸರು ನನ್ನ ವಿಚಾರಣೆ ಮಾಡಿಲ್ಲ.

ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ನೀಡಲಾಯಿತು.

ಪಾಟೀ ಸವಾಲು ಶ್ರೀ ಎಪಿಪಿ ವಕೀಲರಿಂದಃ-

ದಿ.23-12-12ರಂದು ನಾವು ದೇವಸ್ಥಾನಕ್ಕೆ ಹೋಗುತ್ತಿದ್ದಾಗ ಆರೋಪಿಗಳು ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1ರವರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಕಾಲುಗಳಿಂದ ಹೊಡೆದು ಚಾಸಾ-1 ಮತ್ತು ಆಕೆಯ ಗಂಡನಿಗೆ ಪ್ರಾಣ ಬೆದರಿಕೆ ಹಾಕಿರತ್ತಾರೆಂದರೆ ಸರಿಯಲ್ಲ. ಅದರಂತೆ "ದಿ.23-12-12ರಂದು -------ಕೋರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನುನಿಪಿ-2 ಎಂದು ಗುರ್ತಿಸಲಾಯಿತು. ಆರೋಪಿಯೊಂದಿಗೆ ರಾಜಿಯಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಕನಕಪುರ.

ಓ ಹೇ ಕೇ ಸ ಇ